



## ಚಪ್ಪಾಳೆ ತಟ್ಟಿ ಸ್ವಾಗತಿಸೋಣ

ಕಲರ್ಸ್ ಕನ್ನಡದ ‘ಎದೆತುಂಬಿ ಹಾಡುವೆನು’ ಸಂಗೀತ ಕಾರ್ಯಕ್ರಮದಲ್ಲಿ ಎಸ್. ಪಿ. ಬಾಲಸುಬ್ರಮಣ್ಯಂ ಅವರು ವೇದಿಕೆಯಲ್ಲೇ ಕುಳಿತು ಕಾರ್ಯಕ್ರಮವನ್ನು ನಡೆಸಿಕೊಡುತ್ತಿದ್ದಾರೆ ಅನ್ನಿಸುತ್ತದೆ. ಅವರು ಸ್ಪರ್ಧಿಗಳನ್ನು ಚಪ್ಪಾಳೆ ತಟ್ಟಿ ಸ್ವಾಗತಿಸೋಣ ಎಂದು ಹೇಳುತ್ತಿದ್ದ ಮಾತು ಮತ್ತೆ ಮತ್ತೆ ರಿಂಗಣಿಸಿದಂತೆ ಕೇಳುತ್ತಿದೆ.

ಈಗಿನ ನಿರೂಪಣೆಯಲ್ಲಿ ಮೊದಲು ಕನ್ನಡ ಪದ ಆಮೇಲೆ ಅಂಡ್ ಅನ್ನುವ ಇಂಗ್ಲಿಷ್ ಪದ, ಮತ್ತೆ ಕನ್ನಡದ ಪದ ಕೇಳಲು ವಿಚಿತ್ರ ಎನಿಸುತ್ತದೆ. ನಿರೂಪಕಿಯಾಗಲಿ, ತೀರ್ಪುಗಾರರಾಗಲಿ, ಸ್ಪರ್ಧಿಗಳಾಗಲಿ ಇಂಗ್ಲಿಷ್‌ನಲ್ಲೇ ಏಕೆ ಮಾತಾಡಬೇಕು? ಇದು ಕನ್ನಡ ಹಾಡುಗಳ ಸ್ಪರ್ಧೆ. ದಯವಿಟ್ಟು ಇನ್ನು ಮುಂದೆ ಕನ್ನಡ ಬಳಕೆಗೆ ಗಮನ ಕೊಟ್ಟರೆ ಕಾರ್ಯಕ್ರಮ ಇನ್ನೂ ಉತ್ತಮ ಎನಿಸುತ್ತದೆ.

—ವಿಜಯರಾವ್ ಬೆಂಗಳೂರು

## ಪುನರಾವರ್ತಿತ ಸಿನಿಮಾ ಸರಣಿ

ಟೀವಿ ವಾಹಿನಿಗಳಲ್ಲಿ ಬಿತ್ತರವಾಗುವ ಸಿನಿಮಾಗಳು ಬಹುತೇಕ ಪುನಾರಾವರ್ತನೆಗೊಳ್ಳುತ್ತವೆ.
ಅಭಿನಯ ಶಾರದೆ ಜಯಂತಿ ಅಭಿನಯದ ‘ಚಂದವಳ್ಳಿಯ ತೋಟ’, ‘ಎಡಕಲ್ಲುಗುಡ್ಡದ ಮೇಲೆ’, ‘ಚಕ್ರತೀರ್ಥ’ದಂತಹ ಚಿತ್ರಗಳನ್ನು ಅವರ ಸ್ಮರಣೆಗಾದರೂ ಹಾಕಿದರೆ ಚೆನ್ನಾಗಿರುತ್ತದೆ.

ಆ ಕಾಲಘಟ್ಟದ ಕೆಲವು ಸಿನಿಮಾಗಳಲ್ಲಿ ಜನಪ್ರಿಯ ಕಾದಂಬರಿಗಳಿಗೆ ದೃಶ್ಯ ರೂಪ ನೀಡಿದ್ದು ಮೆಚ್ಚುವಂತಹದ್ದು. ಅಂತಹ ಅದ್ಭುತ ಕಥಾ ಹಂದರದ ದೃಶ್ಯ ಕಾವ್ಯವನ್ನು ಎಷ್ಟು ಬಾರಿ ನೋಡಿದರೂ ಬೇಸರವಾಗುವುದಿಲ್ಲ. ಆದರೆ ಏಕ ಮಾದರಿಯ ಸಿನಿಮಾಗಳೇ ಹೆಚ್ಚು ಮರುಪ್ರಸಾರ ಆಗುತ್ತಿರುವುದನ್ನು ತಪ್ಪಿಸಿದರೆ ಒಳಿತು.

—ಪೂರ್ಣಿಮಾ ಮೂರ್ತಿ, ಬೆಂಗಳೂರು

ವಾರದ ಪತ್ರ

## ಅಶೋಕ ಮತ್ತೆ ಬರಲಿ

ಕಲರ್ಸ್ ಸೂಪರ್‌ನಲ್ಲಿ ‘ಚಕ್ರವರ್ತಿ ಅಶೋಕ’ ಬಿತ್ತರವಾಗುತ್ತಿತ್ತು. ಡಬ್ಬಿಂಗ್ ಕಥೆ ಆದರೂ ವರ್ಣರಂಜಿತ ಅದ್ದೂರಿ ನಿರ್ಮಾಣ ವೀಕ್ಷಕರನ್ನು ಹಿಡಿದಿಟ್ಟಿತ್ತು. ಚಾರಿತ್ರಿಕ ಕಥೆಯನ್ನು ಹೊಸಬಗೆಯಲ್ಲಿ ನಿರೂಪಣೆ ಮಾಡಿದ್ದು ಜನ ಮೆಚ್ಚುಗೆಗೆ ಕಾರಣವಾಗಿತ್ತು. ಇತ್ತೀಚೆಗೆ ಅದು ಟೀವಿಯಲ್ಲಿ ಪ್ರಸಾರವಾಗುತ್ತಿಲ್ಲ. ಅದನ್ನು ನೋಡುವ ಕುತೂಹಲದಿಂದ ಮಕ್ಕಳು ಆ್ಯಪ್ ಮೊರೆ ಹೋಗುತ್ತಿದ್ದಾರೆ.

ಕಿರುತೆರೆಯಿಂದ ಅಂಗೈಯಗಲದ ಮೊಬೈಲ್‌ಗೆ ಬದಲಾಗಿರುವುದು ಅವರಿಗೆ ಮಾತ್ರವಲ್ಲದೆ ಮನೆಯಲ್ಲೂ ಕಿರಿಕಿರಿಯನ್ನು ಉಂಟುಮಾಡುತ್ತಿದೆ. ಮೊದಲಾದರೆ, ಯಾವುದಾದರೂ ಕಂತು ತಪ್ಪಿಸಿಕೊಂಡಿದ್ದರೆ ಮಾತ್ರ ಮೊಬೈಲ್‌ನಲ್ಲಿ ನೋಡುತ್ತಿದ್ದರು. ಆದರೀಗ ಮೊಬೈಲ್‌ನಲ್ಲಿ ಪೂರ್ಣ ಧಾರಾವಾಹಿ ನೋಡುವುದು ದುಸ್ತರ. ಕಥೆಯಲ್ಲಿ ಈಗ ಚಾಣಕ್ಯ ಅವರನ್ನು ಹತ್ಯೆ ಮಾಡಲಾಗಿದೆ. ಅದನ್ನು ಅಶೋಕ ಭೇದಿಸಿ ತಪ್ಪಿತಸ್ಥರಿಗೆ ಶಿಕ್ಷೆ ಆಗುವಂತೆ ಮಾಡಬೇಕು. ಮಾತ್ರವಲ್ಲ ಹದಿಹರೆಯದ ಆ ಬಾಲಕ ಸಿಂಹಾಸನವನ್ನು ಏರಬೇಕಿದೆ. ಇಂತಹ ರೋಚಕ ಸನ್ನಿವೇಶವನ್ನು ತೆರೆಯ ಮೂಲಕವೇ ಕಣ್ಣುತುಂಬಿಕೊಂಡಿದ್ದರೆ ಆನಂದವಾಗುತ್ತಿತ್ತು. ಈ ಕಾರಣಕ್ಕಾಗಿ ಪುನಃ ‘ಚಕ್ರವರ್ತಿ ಅಶೋಕ’ವನ್ನು ವಾಹಿನಿಯಲ್ಲಿ ಪ್ರಸಾರ ಮಾಡಿದರೆ ಚೆನ್ನಾಗಿರುತ್ತದೆ.

—ನಳಿನಿ ಬೆಂಗಳೂರು

## ಪ್ರೇಮದ ಹೊಸ ಟ್ರೆಂಡ್

ಝೀ ಕನ್ನಡದಲ್ಲಿ ಪ್ರಸಾರವಾಗುತ್ತಿರುವ ರೀಮೇಕ್ ಧಾರಾವಾಹಿ ‘ಹಿಟ್ಲರ್ ಕಲ್ಯಾಣ’ದ ನಾಯಕಿ ಲೀಲಾ ಅವರಿಗೆ ಅಭಿನಯ ಹೊಸದಾದರೂ ಲೀಲಾಜಾಲವಾಗಿ ನಟಿಸುತ್ತಿದ್ದಾರೆ. ಆಕೆಯ ತಂಗಿ ಚುಕ್ಕಿ ಮುದ್ದಾಗಿದ್ದಾಳೆ. ಇದನ್ನು ನೋಡಿದ ಮೇಲೆ ಮಧ್ಯ ವಯಸ್ಕ ಪುರುಷ ಹಾಗೂ 20ರ ಆಸುಪಾಸಿನ ಯುವತಿಯ ನಡುವಿನ ಪ್ರೇಮ ಕಥೆಗಳ ಟ್ರೆಂಡ್ ಶುರುವಾಗಿದೆ ಅನ್ನುವ ಅನುಮಾನ ಕಾಡುತ್ತಿದೆ. ನಿಜಜೀವನದಲ್ಲೂ ಈ ರೀತಿಯ ಕಥೆಗಳು ನವ ತರುಣಿಯರ ಮೇಲೆ ಪ್ರಭಾವ ಬೀರದಿದ್ದರೆ ಸಾಕು.

—ಟಿ.ಎಸ್. ಪ್ರತಿಭಾ ಚಿತ್ರದುರ್ಗ

## ಮದುವೆಗೆ ಶಿಕ್ಷಕರೂ ಬಂದಿದ್ದರೆ...

ಝೀ ಕನ್ನಡದ ‘ಜೊತೆ ಜೊತೆಯಲಿ’ ಧಾರಾವಾಹಿಯಲ್ಲಿ ಆರ್ಯ—ಅನು ಮದುವೆಗೆ ಆರ್ಯ ಓದಿದ ಊಟಿ ಸ್ಕೂಲಿನ ಶಿಕ್ಷಕಿಯನ್ನು, ಹಾಸ್ಟೆಲ್ ಅಜ್ಜನನ್ನು ಕರೆಯಬೇಕಿತ್ತು. ಅನು ಅಲ್ಲಿಗೆ ಹೋದಾಗ ಅವರು ಎಷ್ಟೋ ವಿಷಯಗಳನ್ನು ನೆನಪಿಟ್ಟುಕೊಂಡು ಹೇಳಿದ್ದರ. ಸಂಜುನನ್ನು, ಅವನ ಮದುವೆಯನ್ನು ನೋಡಿ ಅವರಿಗೂ ಖುಷಿ ಆಗುತಿತ್ತು.

—ನಿಂಗಮ್ಮ ಭಾವಿಕಟ್ಟಿ, ಹುನಗುಂದ

## ಸ್ತ್ರೀ ವಾಚಕ ಕಣೋ...!

ಕಲರ್ಸ್ ಕನ್ನಡ ಹೊಸ ಧಾರಾವಾಹಿ ‘ಲಕ್ಷಣ’ದಲ್ಲಿ ಭೂಪತಿ, ನಕ್ಷತ್ರಾ’ಳನ್ನು ‘ಕಣೋ’ ಎಂದು ಮಾತನಾಡಿಸುತ್ತಾನೆ. ಸುಮಾರು ವರ್ಷಗಳ ಹಿಂದೆ ಹುಡುಗಿಯರಿಗೆ ‘ಕಣೋ’ ಎನ್ನುವುದು ಫ್ಯಾಷನ್ ಆಗಿಬಿಟ್ಟಿತ್ತು. ಅದು ಮತ್ತೆ ಮರುಕಳಿಸಿತು ಅನಿಸುತ್ತಿದೆ. ಸ್ವಾತಿಯನ್ನು ಕಂಡ ಅವರ ತಂದೆ ‘ಹೆಸರಿಗೆ ತಕ್ಕಂತೆ ಬೆಳ್ಳಗೆ ಲಕ್ಷ್ಮಿ ತರಹ ಲಕ್ಷಣವಾಗಿದಿಯಾ’ ಎಂದಾಗ ಅವರು ಸಾಕ್ಷಾತ್ ಲಕ್ಷ್ಮಿಯನ್ನು ನೋಡಿರುರೇನೊ ಅನಿಸಿತು.

—ಸೀತಾ ಕೇಶವ ಸಿಡ್ನಿ

## ಸಿ.ಎಂ. ಸ್ಪೀಕಿಂಗ್

ಟಿ.ವಿ.9 ಸುದ್ದಿವಾಹಿನಿಯಲ್ಲಿ ಪ್ರಸಾರವಾದ ‘ಸಿ.ಎಂ. ಸ್ಪೀಕಿಂಗ್’ ಕಾರ್ಯಕ್ರಮ ಅದ್ಭುತವಾಗಿತ್ತು. ರಾಜ್ಯದ ಜನರಲ್ಲಿ ಹಲವಾರು ಸಮಸ್ಯೆಗಳು ಇದ್ದರೂ ಮುಖ್ಯ ವಾಹಿನಿಗೆ ಬರಬೇಕಾದ ಎಷ್ಟೋ ಸಮಸ್ಯೆಗಳು ಕಾರ್ಯಕ್ರಮದ ಮೂಲಕ ಮುಖ್ಯಮಂತ್ರಿ ಗಮನಕ್ಕೆ ಬಂದಿತು. ಕೂಡಲೇ ಅವುಗಳಿಗೆ ಪರಿಹಾರ ಸೂಚಿಸಲಾಯಿತು. ನೇರವಾಗಿ ಮುಖ್ಯಮಂತ್ರಿಗಳಿಗೆ ಸಮಸ್ಯೆಗಳನ್ನು ತಿಳಿಸಿದ ಈ ಪ್ರಯತ್ನ ಅಮೋಘ. ಇಂತಹ ಕಾರ್ಯಕ್ರಮಗಳು ಇನ್ನಷ್ಟು ಮೂಡಿ ಬರಲಿ

—ಆಕಸ್ಮಿತ ಪ್ರದೀಪ್, ಬೆಂಗಳೂರು

## ತಪ್ಪನ್ನು ತಿದ್ದಲಿ

ಕಲರ್ಸ್ ಕನ್ನಡದಲ್ಲಿ ಇತ್ತೀಚೆಗೆ ಪ್ರಾರಂಭವಾಗಿರುವ ‘ಎದೆ ತುಂಬಿ ಹಾಡುವೆನು’ ರಿಯಾಲಿಟಿ ಶೋ ಪ್ರಾರಂಭದಲ್ಲಿಯೇ ಹಳಿ ತಪ್ಪುತ್ತಿರಬಹುದೇ ಎಂಬ ಸಂದೇಹ ಮೂಡುತ್ತಿದೆ. ಸಂಗೀತ ಕಲಿಯದ ಕೆಲವರನ್ನು ಪ್ರೋತ್ಸಾಹಿಸುತ್ತಿದ್ದಾರೆ ಎನ್ನುವ ಅನುಮಾನ ಬರುತ್ತಿದೆ.

ಒಬ್ಬ ಹಾಡುಗಾರ ಶ್ರುತಿ ತಪ್ಪಿ, ಭಾವರಹಿತವಾಗಿ ಹಾಡಿದರೂ, ಅದ್ಭುತ ಎನ್ನುವಂತೆ ಇಬ್ಬರು ತೀರ್ಪುಗಾರರು ಪ್ರತಿಕ್ರಿಯಿಸಿದರು. ಹಾಡುಗಾರನ ತಪ್ಪನ್ನು ತಿಳಿಸದಿದ್ದರೆ ಅದು ಅವರಿಗೆ ಮಾಡುವ ಮೋಸ.

—ನವೀನ ವಿ. ಭದ್ರಾವತಿ

## ಮಿತಿ ಮೀರಿದ ಮೀರಾ ಮಾತು

ಕಲರ್ಸ್ ಕನ್ನಡದ ‘ನಮ್ಮನೆ ಯುವರಾಣಿ’ಯಲ್ಲಿ ಅಹಲ್ಯಾ ಎಂಬ ದುಷ್ಟ ಹೆಂಗಸು ಮನೆಯವರ ವಿರುದ್ಧ ಪಿತೂರಿ ಮಾಡಿ ಜೈಲು ಪಾಲಾಗಿದ್ದಳು. ಆಕೆ ಗರ್ಭವತಿ ಎಂದು ತಿಳಿದು ಅವಳನ್ನು ಜೈಲಿನಿಂದ ಬಿಡುಗಡೆ ಮಾಡಿಸುತ್ತಾರೆ. ಹೊರಗಡೆ ಬಂದ ನಂತರವೂ ಮನೆಯವರಿಗೆ ಸವಾಲು ಹಾಕುತ್ತಾಳೆ. ಮತ್ತೊಂದು ಕಡೆ ಮೀರಾ ಅಷ್ಟೆಲ್ಲ ಹಿಂಸೆ ಕೊಟ್ಟ ಅಹಲ್ಯಾಗೆ ಮಣೆ ಹಾಕಲು ಪ್ರಯತ್ನಪಡುತ್ತಾಳೆ. ಒಂದೇ ಸಮನೆ ಮಾತನಾಡುತ್ತಾಳೆ. ದಯವಿಟ್ಟು ಮೀರಾ ಸ್ವಲ್ಪ ಮಾತು ಕಡಿಮೆ ಮಾಡಿದರೆ ಒಳ್ಳೆಯದು.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು